# ಹಲಸಿನ ರಂಗೋಲಿ!



ಉತ್ತರಕನ್ನಡ ಜಿಲ್ಲೆ ಯಲ್ಲಾಪುರದ ರೈತಭವನದಲ್ಲಿ ಎರಡು ತಿಂಗಳ ಹಿಂದೆ ಶಿರಸಿಯ ಕದಂಬ ಸೊಸೈಟಿ ಆಶ್ರಯದಲ್ಲಿ ಈ ಹಲಸಿನ ಮೇಳ ನಡೆಸಲಾಗಿತ್ತು.

■ ಚಿತ್ರ ಬರಹ: ಗಣಪತಿ ಹಾಸ್ಪುರ



ಮನೆಯ ಮುಂದೆ, ದೇವರ ಕೋಣೆ, ಮನೆಯ ಹೊಸ್ತಿಲು ಮುಂದೆ ರಂಗೋಲಿ ಹಾಕುವುದನ್ನು ನೋಡಿದ್ದೇವೆ. ಇದನ್ನು ರಂಗೋಲಿ ಪುಡಿ, ಕಲರ್ ಪುಡಿಗಳಿಂದ ಸುಂದರವಾಗಿ ಹಾಕಲಾಗುತ್ತದೆ. ಚುಕ್ಕಿ ರಂಗೋಲಿ, ರೇಖೆ ರಂಗೋಲಿ, ಧಾನ್ಯ, ಹೂವುಗಳಿಂದ ಹಾಕಿದ ರಂಗೋಲಿ, ಅಚ್ಚಿನಿಂದ ಎರಕ ಹೊಯ್ದಂತಿರುವ ರಂಗೋಲಿ... ಹೀಗೆ ಒಂದೇ ಎರಡೇ?

ಆದರೆ ಚಿತ್ರದಲ್ಲಿರುವ ಈ ಆಕರ್ಷಕ ರಂಗೋಲಿಗಳನ್ನು ಗಮನಿಸಿ. ಇವುಗಳನ್ನು ಬರೀ ಹಲಸಿನಿಂದ ತಯಾರಿಸಲಾಗಿದೆ. ಹಲಸಿನ ಎಲೆ, ಬೀಜ, ತೊಳೆಗಳಿಂದ ಮಾಡಿದ ಈ ರಂಗೋಲಿ ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯುವುದರಲ್ಲಿ ಸಂಶಯವಿಲ್ಲ.

ಅಂದಹಾಗೆ ಈ ಹಲಸಿನ ರಂಗೋಲಿಯನ್ನು ಒಂದು ಸ್ಪರ್ಧೆಯಾಗಿ ಮಾಡಲಾಗಿತ್ತು. ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರದ ರೈತಭವನದಲ್ಲಿ ಎರಡು ತಿಂಗಳ ಹಿಂದೆ ಶಿರಸಿಯ ಕದಂಬ ಸೊಸೈಟಿ ಆಶ್ರಯದಲ್ಲಿ ಈ ಹಲಸಿನ ಮೇಳ ನಡೆಸಲಾಗಿತ್ತು. ಪ್ರತೀ ವರ್ಷ ಈ ಹಲಸಿನ ಮೇಳ ನಡೆಯುತ್ತಿದ್ದು, ಈ ಬಾರಿ ಹಲಸಿನ ರಂಗೋಲಿ ಸ್ಪರ್ಧೆಯಲ್ಲಿ ಪುರುಷ, ಮಹಿಳೆಯರಿಬ್ಬರೂ ಭಾಗವಹಿಸಿದ್ದು ವಿಶೇಷವಾಗಿತ್ತು.



ಈ ಜಗತ್ತೇ ಹೀಗೆ.. ಯಾವ ವ್ಯಕ್ತಿಯಲ್ಲಿ ಯಾವ ಬಗೆಯ ಪ್ರತಿಭೆಯಿದೆ? ಯಾವೆಲ್ಲ ವಸ್ತುವಿನಲ್ಲಿ ಏನೆಲ್ಲಾ ಚಿತ್ರಗಳನ್ನು ಅರಳಿಸಬಹುದು ಎನ್ನುವುದೇ ಅರ್ಥವಾಗುವುದಿಲ್ಲ. ಹಾಗೆ ನೋಡಿದ್ರೆ.... ಯಾವ ವ್ಯಕ್ತಿಯೂ ವ್ಯರ್ಥವಲ್ಲ; ಯಾವ ವಸ್ತುವೂ ನಷ್ಟವಲ್ಲ. ಏಕೆಂದರೆ ಪ್ರತಿಯೊಂದು ವ್ಯಕ್ತಿಯಲ್ಲಿಯೂ ಒಂದೊಂದು ಪ್ರತಿಭೆಯಿದೆ! ಪ್ರತಿ ವಸ್ತುವಿನಲ್ಲಿಯೂ ಜನರನ್ನು ಉಲ್ಲಾಸಗೊಳಿಸುವ ಶಕ್ತಿ, ಸಾಮರ್ಥ್ಯವಿದೆ. ಈ ಮಾತಿಗೆ ಚಿತ್ರದಲ್ಲಿ ಕಾಣುವ ಹಲಸಿನ ರಂಗೋಲಿಯೇ ಉತ್ತಮ ನಿದರ್ಶನ.

ಹಾಗೆ ನೋಡಿದರೆ ಹಲಸಿನ ರಂಗೋಲಿ ಪರಿಸರ ಸ್ನೇಹಿಯೂ ಆಗಿದೆ. ಕೇವಲ ಒಂದು ಹಣ್ಣಿನ ಸಸ್ಯ ಮತ್ತು ಅದರ ಕಾಯಿಯಿಂದ ಸಿಗುವ ವಸ್ತುಗಳನ್ನು ಬಳಸಿಕೊಂಡು ವಿಭಿನ್ನ ಬಗೆಯ ರಂಗೋಲಿಯ ಚಿತ್ರವನ್ನು ಚಿತ್ರಿಸಲು ಸಾಧ್ಯವಿದೆ ಎಂಬುದಕ್ಕೆ ಇಲ್ಲಿ ಕಂಗೊಳಿಸುವ ರಂಗೋಲಿಗಳೇ ಸಾಕ್ಷಿಯಾಗಿದೆ. ಯಾವುದೇ ಬಗೆಯ ರಂಗೋಲಿಯ ಚಿತ್ರಗಳನ್ನು ಚಿತ್ರಿಸಲು ಕಲಾಕಾರರಿಗೆ ಆಸಕ್ತಿ ಮುಖ್ಯವೇ ಹೊರತು; ವಸ್ತುವಲ್ಲ ಎನ್ನುವಂತಿದೆ ಈ ಹಲಸಿನ ರಂಗೋಲಿಗಳು. ■